C.R.P.67
Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.121/2021 ಸಿ. ಡಬ್ಲ್ಯೂ-30 ಪಿ. ಡಬ್ಲ್ಯೂ -23

ದಿನಾಂಕಃ- 22.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಡಾ. ಪುಟ್ಟಸ್ವಾಮಿ |
| ತಂದೆಯ ಹೆಸರು | ಮಲ್ಲಯ್ಯ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಪ್ರಾಧ್ಯಾಪಕರು,<br>ವಿಧಿ ವೈದ್ಯ ಶಾಸ್ತ್ರ ವಿಭಾಗ,<br>ಮಂಡ್ಯ |
| ವಾಸ | ಮಂಡ್ಯ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. 2000 ನೇ ಇಸವಿ ಅಕ್ಟೋಬರ್ ತಿಂಗಳಿನಿಂದ 2023 ನೇ ಇಸವಿ ಫೆಬ್ರವರಿ ತಿಂಗಳ ವರೆಗೆ ನಾನು MIMS ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ಮಾಡಿದ್ದೇನೆ.

2. 2021 ನೇ ಇಸವಿ ಮೇ ತಿಂಗಳ ಸಮಯದಲ್ಲಿ ನಾನು ಪ್ರಾಧ್ಯಾಪಕನಾಗಿ MIMS ನಲ್ಲಿ ಕರ್ತವ್ಯ ಮಾಡುತ್ತಾ ಇದ್ದೆನು. ಯಾವುದೇ ಒಂದು ಅಸಹಜ ಸಾವು ಸಂಭವಿಸಿದಾಗ ಆ ಸಂಬಂಧವಾಗಿ ಆ ಸಾವಿಗೆ ನಿಖರವಾದ ಕಾರಣ ಏನು ಎಂದು ತಿಳಿದುಕೊಳ್ಳವ ಸಂದರ್ಭ ಬಂದರೆ ಪೊಲೀಸರು ವಿಧಿ ವೈದ್ಯ ಶಾಸ್ತ್ರ ವಿಭಾಗದ ಸಹಾಯವನ್ನು ಪಡೆದುಕೊಳ್ಳುತ್ತಾರೆ.

3. ಈ ಪ್ರಕರಣದಲ್ಲಿ ದಿಃ 11.05.2021 ರಂದು ಓರ್ವ ಹೇಮಂತ ಕುಮಾರ ಬಿನ್ ಶ್ರೀಕಂಠ ಎಂಬ ವ್ಯಕ್ತಿಯ ಮೃತ ದೇಹವನ್ನು ಮದ್ದೂರು ಪೊಲೀಸ್ ಠಾಣೆಯವರು ನಮ್ಮ MIMS ಆಸ್ಪತ್ರೆಗೆ ಶವ ಪರೀಕ್ಷೆಗಾಗಿ ತಂದಿದ್ದರು. ಸದರಿ ವ್ಯಕ್ತಿಯ ಸಾವಿನ ಸಂಬಂಧವಾಗಿ Crime No 140/21 ಎಂಬ ಪ್ರಕರಣವು ನೋಂದಣಿಯಾಗಿತ್ತು.

4. ಆ ಶವವನ್ನು ನಾನು ನೋಡಿದಾಗ ಶವದ ಮೈಮೇಲೆ

1. ಅರ್ಧ ತೋಳಿನ ನೀಲಿ, ಕಿತ್ತಳೆ, ಕಪ್ಪು ಮತ್ತು ಬಿಳಿ ಮಿಶ್ರಿತವಾದ ಒಂದು ಟೀ ಶರಟು ಇತ್ತು. ಆ ಟೀ ಶರಟಿಗೆ ಕಾಲರ್ ಇತ್ತು. ಆ ಟೀ ಶರಟು ಅಲ್ಲಲ್ಲಿ ಹರಿದಿತ್ತು. ಆ ಇಡೀ ಟೀ ಶರಟು ರಕ್ತದಲ್ಲಿ ತೊಯ್ದುಂತೆ (soaked with blood) ಆಗಿತ್ತು.

2. ಅದೇ ರೀತಿ ಆ ಶವದ ಮೈಮೇಲೆ ತೋಳು ಇಲ್ಲದ ಬನಿಯನ್ ಇತ್ತು ಮತ್ತು ಅಲ್ಲಲ್ಲಿ ಹರಿದಿತ್ತು. ಆ ಇಡೀ ಬನಿಯನ್ ರಕ್ತದಲ್ಲಿ ತೊಯ್ದುಂತೆ (soaked with blood) ಆಗಿತ್ತು.

3. ನೀಲಿ ಮತ್ತು ಬಿಳಿ ಮಿಶ್ರಿತವಾದ ಒಂದು ನಿಕ್ಕರ್ ಆ ಶವದ ಮೈಮೇಲೆ ಇತ್ತು.

4. ರಾಮ ರಾಜ್ ಕಂಪನಿಯ ಒಂದು ಅಂಡರ್ ವೇರು ಆ ಶವದ ಮೇಲೆ ಇತ್ತು ಆ ಅಂಡರು ವೇರು ಕಡು ನೀಲಿ ಬಣ್ಣದ್ದು ಆಗಿತ್ತು.

5. ಆ ಶವದ ಮೈಮೇಲೆ ಒಂದು ಕೆಂಪು ಬಣ್ಣದ ಉಡುದಾರ ಇತ್ತು.

5. ಆ ಶವವನ್ನು ನಾನು ಪರೀಕ್ಷೆ ಮಾಡಿ ನೋಡಿದಾಗ ಅದು ಓರ್ವ ಗಂಡಸಿನ ಶವ ಆಗಿತ್ತು ಮತ್ತು ಆ ಮೃತ ವ್ಯಕ್ತಿಗೆ ಸುಮಾರು 26 ವರುಷ ವಯಸ್ಸು ಆಗಿತ್ತು ಮತ್ತು ಧೃಢಕಾಯನಾಗಿದ್ದನು ಮತ್ತು ಗೋಧಿ ಬಣ್ಣದ ಚರ್ಮ ಹೊಂದಿದ್ದನು. ಆ ಶವದ ಎತ್ತರವು 184 ಸೆಂಟಿ ಮೀಟರ್ ಇತ್ತು. Rigor mortis ಇಡೀ ದೇಹಾದ್ಯಂತ ಇತ್ತು.

6. ಆ ಶವದ ಬೆನ್ನಿನ ಮೇಲೆ ಮತ್ತು ತೊಡೆ ಮತ್ತು ಕಾಲುಗಳ ಹಿಂಭಾಗದಲ್ಲಿ post mortem staining ಇತ್ತು.

7. ಆ ಶವದ ತಲೆ ಕೂದಲು ಕಪ್ಪು ಬಣ್ಣದಿಂದ ಕೂಡಿತ್ತು ಮತ್ತು ಆ ಕೂದಲಿಗೂ ಸಹಾ ರಕ್ತವಾಗಿತ್ತು. ಕಣ್ಣುಗಳು ತೆರೆದಿತ್ತು. ಎಡಗಣ್ಣಿನ ಗಾತ್ರಕ್ಕಿಂತ ಬಲಗಣ್ಣಿನ ಗಾತ್ರವು ದೊಡ್ಡದು ಇತ್ತು. ಸದರಿ ಬಲಗಣ್ಣಿನ ಕಾರ್ನಿಯ (Carnia) ಮಬ್ಬಿನಿಂದ ಕೂಡಿತ್ತು. ಕಣ್ಣಿನ ಪೊರೆಯು ಪೇಲವವಾಗಿತ್ತು. ಆ ಶವದಲ್ಲಿ ಮೀಸೆಯು ಕಪ್ಪು ಬಣ್ಣದಿಂದ ಕೂಡಿತ್ತು. ಆ ಶವದ ಗಡ್ಡವು ಸಹಾ ಕಪ್ಪು ಬಣ್ಣದಿಂದ ಕೂಡಿತ್ತು ಮತ್ತು ಸುಮಾರು ಒಂದು ದಿನದಷ್ಟು ಬೆಳವಣಿಗೆ ಇರುವ ಗಡ್ಡ ಇತ್ತು.

8. ಆ ಶವದ ಬಲಗೈನ ಮುಂಗೈನ ಒಳಭಾಗದಲ್ಲಿ ಒಂದು ಸಿಂಹದ ಚಿತ್ರದ ಹಚ್ಚೆ ಹಾಕಿರುವ ಗುರುತು ಇತ್ತು. ಬಲ ಭುಜದ ಮೇಲೆ ಒಂದು ಕಪ್ಪು ಬಣ್ಣದ ಕಾರಳ್ಳು (mole) ಇತ್ತು.

9. ಆ ಮೃತದೇಹದ ಮೈಮೇಲೆ ಈ ಕೆಳಕಂಡ ಗಾಯಗಳು ಇದ್ದವು.

1. 8 ಸೆಂಟಿ ಮೀಟರ್ X 2.5 ಸೆಂಟಿ ಮೀಟರ್ ಅಳತೆಯ ಮತ್ತು ತಲೆಯ ಒಳಭಾಗದ ಆಳಕ್ಕೆ ಹೋಗಿರುವ ಒಂದು ಕತ್ತರಿಸಿದ ಗಾಯ ಆ ಶವದ ಬಲಭಾಗದ ತಲೆಯ ಮೇಲೆ ಇತ್ತು. ಇದರ ಜೊತೆಗೆ ಈ ಮೊದಲನೇ ಗಾಯವು ಇದ್ದ ಸ್ಥಳದಲ್ಲಿ ತಲೆ ಬುರುಡೆ (skull) ಸಹಾ ಮುರಿದಿತ್ತು.

2. 3 ಸೆಂಟಿ ಮೀಟರ್ X 1 ಸೆಂಟಿ ಮೀಟರ್ ಅಳತೆಯ ಮತ್ತು ತಲೆಯ ಒಳಭಾಗದ ಆಳಕ್ಕೆ ಹೋಗಿರುವ ಒಂದು ಕತ್ತರಿಸಿದ ಗಾಯ ಆ ತಲೆಯ ಮುಂಭಾಗದ ಬಲಭಾಗದಲ್ಲಿ ಇತ್ತು. ಈ ಎರಡನೇ ಗಾಯವು ಮೇಲೆ ಹೇಳಿದ ಮೊದಲನೇ ಗಾಯದಿಂದ ಸುಮಾರು 2 ಸೆಂಟಿ ಮೀಟರ್ ದೂರ ಇತ್ತು ಮತ್ತು ಒಂದನೇ ಗಾಯಕ್ಕೆ ಸಮನಾಂತರವಾಗಿ ಇತ್ತು.

3. 10 ಸೆಂಟಿ ಮೀಟರ್ X 4 ಸೆಂಟಿ ಮೀಟರ್ X ಮೂಳೆಯ ಆಳಕ್ಕೆ ಇಳಿದಿರುವ ಒಂದು ಕತ್ತರಿಸಿದ ಗಾಯವು ಬಲಕಿವಿಯ ಸ್ವಲ್ಪ ಮೇಲುಗಡೆ ಇರುವ ಭಾಗದಲ್ಲಿ ಇತ್ತು.

4. 10 ಸೆಂಟಿ ಮೀಟರ್ X 4 ಸೆಂಟಿ ಮೀಟರ್ ಗಾತ್ರದ ಮತ್ತು ತಲೆಯ ಒಳಭಾಗದ ಆಳಕ್ಕೆ ಇಳಿದಿರುವ ಗಾಯವು ಎಡಕಿವಿಯ ಮೇಲ್ಭಾಗದಲ್ಲಿ ಸುಮಾರು 3 ಸೆಂಟಿ ಮೀಟರ್ ದೂರದಲ್ಲಿ ಇತ್ತು ಮತ್ತು ಆ ಸ್ಥಳದಲ್ಲಿ ತಲೆಯ ಒಳಭಾಗದ ಆಳಕ್ಕೆ ಗಾಯ ಆಗಿತ್ತು ಮತ್ತು ತಲೆ ಬುರುಡೆಯ ಮೂಳೆಯು ಚರ್ಮವನ್ನು ಸೀಳಿಕೊಂಡು ಹೊರಕ್ಕೆ ಬಂದಿತ್ತು ಮತ್ತು ಮೆದುಳಿನ ಸ್ವಲ್ಪ ಭಾಗಗಳು ಆ ತೂತಿನಿಂದ ಹೊರಬಂದಿತ್ತು.

5. 12 ಸೆಂಟಿ ಮೀಟರ್ X 3 ಸೆಂಟಿ ಮೀಟರ್ ಅಳತೆಯ ಮತ್ತು ಮೂಳೆಯ ಆಳಕ್ಕೆ ಇಳಿದಿರುವ ಗಾಯವು ಆ ಮೃತ ದೇಹದ ಕೆಳ ದವಡೆಯಿಂದ ಪ್ರಾರಂಭವಾಗಿ ತಲೆಯ ಹಿಂಭಾಗದವರೆಗೂ ಇತ್ತು.

6. ಆ ಮೃತ ದೇಹದ ಹಣೆ, ಎಡಭಾಗದ ಕೆನ್ನೆ, ಮತ್ತು ಮೂಗಿನ ಮೇಲೆ ಮತ್ತು ಬಲಭಾಗದ ಕೆನ್ನೆಯ ಮೇಲೆ ಮತ್ತು ಗಲ್ಲದ ಮೇಲೆ ಹಲವಾರು ತರಚಿದ ಮತ್ತು ಹರಿದ ಗಾಯಗಳು ಇದ್ದವು ಮತ್ತು ಮುಖ ಮತ್ತು ತಲೆಯು ವಿಕೃತವಾಗಿತ್ತು.

7. 4.5 ಸೆಂಟಿ ಮೀಟರ್ X 2 ಸೆಂಟಿ ಮೀಟರ್ ಗಾತ್ರದ ಮತ್ತು ಮಾಂಸಖಂಡದ ಆಳಕ್ಕೆ ಇಳಿದಿರುವಂತಹ ಗಾಯವು ಆ ದೇಹದ ಬಲಭಾಗದ ಎದೆಯ ಮೇಲೆ ಇತ್ತು ಮತ್ತು ಆ ಗಾಯವು ಆ ಮೃತ ದೇಹದ right nipple ನಿಂದ ಸುಮಾರು 6 ಸೆಂಟಿ ಮೀಟರ್ ಮೇಲ್ಭಾಗದಲ್ಲಿ ದೇಹದ ಒಳಭಾಗಕ್ಕೆ ಆದಂತೆ ಇತ್ತು.

8. 8 ಸೆಂಟಿ ಮೀಟರ್ X 2.4 ಸೆಂಟಿ ಮೀಟರ್ ಗಾತ್ರದ ಮತ್ತು ಹೊಟ್ಟೆಯ ಆಳಕ್ಕೆ ಇಳಿದಿರುವಂತಹ ಗಾಯವು ಮೃತ ದೇಹದ subcostal (ಎಡ ಕಿಬ್ಬೊಟ್ಟೆ) ಪ್ರದೇಶದಲ್ಲಿ ಒಂದು ಚುಚ್ಚಿದ ಗಾಯ ಇತ್ತು ಮತ್ತು ಆ ಗಾಯವು ಆ ಮೃತ ದೇಹದ ಹೊಕ್ಕಳಿನಿಂದ ಸುಮಾರು 9 ಸೆಂಟಿ ಮೀಟರ್ ದೂರದಲ್ಲಿ ಇತ್ತು ಮತ್ತು ಆ ಗಾಯದ ಕೆಳಭಾಗದ ಅಂಚು

slope ನಿಂದ ಕೂಡಿತ್ತು ಮತ್ತು ಆ ಗಾಯವು ಅಂಡಾಕಾರ (oval) ಆಕಾರದಲ್ಲಿ ಇತ್ತು ಮತ್ತು ಆ ಗಾಯದ ಸ್ಥಳದಲ್ಲಿ ಕೊಬ್ಬಿನ ಅಂಶಗಳು ಹೊರಬಂದಿತ್ತು.

9. 4.5 ಸೆಂಟಿ ಮೀಟರ್ X 1.5 ಸೆಂಟಿ ಮೀಟರ್ ಗಾತ್ರದ ಮತ್ತು ಹೊಟ್ಟೆಯ ಒಳಭಾಗದ ಆಳಕ್ಕೆ ಇಳಿದಿರುವ ಗಾಯವು ಆ ಮೃತದೇಹದ ಬಲಭಾಗದ ಕಿಬ್ಬೊಟ್ಟೆಯ ಬಳಿ ಇತ್ತು ಮತ್ತು ಆ ಗಾಯವು right nipple ನಿಂದ 20 ಸೆಂಟಿ ಮೀಟರ್ ನಷ್ಟು ಕೆಳಭಾಗದಲ್ಲಿ ಇತ್ತು ಮತ್ತು ಆ ಗಾಯದ ಹೊರಭಾಗವು ಮೊನಚಾಗಿ ಇರಲಿಲ್ಲ, ಆದರೆ ಅದರ ಕೆಳಭಾಗವು ಮೊನಚಾಗಿ ಇತ್ತು ಮತ್ತು ಇಳಿಜಾರಿನಿಂದ ಕೂಡಿತ್ತು.

10. ಆ ಮೃತ ದೇಹದ ಬಲಗೈ ಮಣಿಕಟ್ಟಿನ (wrist) ಬಳಿ 14 ಸೆಂಟಿ ಮೀಟರ್ X 2 ಸೆಂಟಿ ಮೀಟರ್ ಗಾತ್ರದ ಕತ್ತರಿಸಿದ ಗಾಯ ಇತ್ತು ಮತ್ತು ಆ ಸ್ಥಳದಲ್ಲಿ ಕೈ ನೇತಾಡುತ್ತಾ ಇತ್ತು ಮತ್ತು ಕೇವಲ ಚರ್ಮದ ರಕ್ಷಣೆಯಿಂದ ಮಾತ್ರ ಕೈ ನಿಂತಿತ್ತು.

11. ಮೇಲೆ ಹೇಳಿದ 10 ನೇ ಗಾಯದಿಂದ 3 ಸೆಂಟಿ ಮೀಟರ್ ಕೆಳಗಡೆಗೆ ಮತ್ತೊಂದು ಕತ್ತರಿಸಿದ ಗಾಯ ಇತ್ತು ಮತ್ತು ಆ ಗಾಯವು 17 ಸೆಂಟಿ ಮೀಟರ್ X 2 ಸೆಂಟಿ ಮೀಟರ್ ಗಾತ್ರ ಇತ್ತು ಮತ್ತು ಆ ಶವದ ಬಲಗೈ ಬೆರಳುಗಳು ನೇತಾಡುತ್ತಾ ಇದ್ದವು ಮತ್ತು ಆ ಸ್ಥಳದಲ್ಲಿ ಮೂಳೆ ಮುರಿದಿತ್ತು. ಕೇವಲ ಚರ್ಮದ ರಕ್ಷಣೆಯಿಂದ ಆ ಬೆರಳುಗಳು ನೇತಾಡುತ್ತಾ ಇದ್ದವು.

12. ಆ ಶವದ ಎಡಗೈನ ಮೊಣಸಂದಿಯ ಬಳಿ ಮತ್ತೊಂದು ಕತ್ತರಿಸಿದ ಗಾಯ ಇತ್ತು ಅದರ ಗಾತ್ರದ 11 ಸೆಂಟಿ ಮೀಟರ್ X 5 ಸೆಂಟಿ ಮೀಟರ್ ಗಾತ್ರ ಇತ್ತು ಮತ್ತು ಮೊಣಸಂದಿಯ ಮೂಳೆಯ ಆಳಕ್ಕೆ ಇಳಿದಿರುವಂತಹ ಗಾಯ ಆಗಿತ್ತು ಮತ್ತು ಎಲುಬುಗಳು ಕತ್ತರಿಸಿದ್ದವು.

13. ಆ ಶವದ ಸೊಂಟದ ಮೇಲೆ ಮತ್ತು ಬೆನ್ನಿನ ಮೇಲೆ ಸುಮಾರು 40 ಸೆಂಟಿ ಮೀಟರ್ X 16 ಸೆಂಟಿ ಮೀಟರ್ ಗಾತ್ರದ ತರಚು ಗಾಯಗಳು ಇದ್ದವು.

14. ಎಡ ಮಂಡಿ ಚಿಪ್ಪಿನ ಮೇಲೆ 4 ಸೆಂಟಿ ಮೀಟರ್ X 2.5 ಸೆಂಟಿ ಮೀಟರ್ ಗಾತ್ರದ ತರಚು ಗಾಯ ಇತ್ತು.

15. ಬಲಮುಂಗೈನ ಹೊರಭಾಗದ ಮಧ್ಯದಲ್ಲಿ ಸುಮಾರು 7 ಸೆಂಟಿ ಮೀಟರ್ X 3 ಸೆಂಟಿ ಮೀಟರ್ ಗಾತ್ರದ ತರಚು ಗಾಯವು ಇತ್ತು.

16. 4 ಸೆಂಟಿ ಮೀಟರ್ X 2 ಸೆಂಟಿ ಮೀಟರ್ ಗಾತ್ರದ ಮತ್ತು ಮೂಳೆಯ ಆಳಕ್ಕೆ ಇಳಿದಿರುವ ಒಂದು ಕತ್ತರಿಸಿದ ಗಾಯವು ಆ ಶವದ ನೆತ್ತಿಯ ಮೇಲೆ ಅಡ್ಡಡ್ಡವಾಗಿ ಇತ್ತು.

10. ಮೇಲೆ ನಮೂದು ಮಾಡಿರುವ ಎಲ್ಲಾ ಗಾಯಗಳು ಆ ವ್ಯಕ್ತಿಯ ಸಾವು ಸಂಭವಿಸುವುದಕ್ಕಿಂತ ಮೊದಲು ಆಗಿರುವ ಗಾಯಗಳು (ante–mortem) ಆಗಿದ್ದವು ಮತ್ತು ಅವೆಲ್ಲವೂ ತಾಜಾ (fresh in nature) ಗಾಯಗಳು ಆಗಿದ್ದವು.

11. ಆ ಶವದ ತಲೆ ಬುರುಡೆಯ ಮೇಲೆ ಗಾಯಗಳು ಇದ್ದವು ಮತ್ತು ಆ ತಲೆ ಬುರುಡೆಯು ಸಹಾ ಮುರಿದಿತ್ತು ಮತ್ತು ಚೂರು ಚೂರು (fragmented) ಆಗಿತ್ತು ಮತ್ತು ವಿರೂಪಗೊಂಡಿತ್ತು (deformed).

12. ಆ ಶವದ ಮೆದುಳಿನ ಪೊರೆಗಳು (membranes) ಗಳು ಸಹಾ ಹರಿದಿದ್ದವು. ಆ ಮೃತ ದೇಹದ ಮೆದುಳು ಸಹಾ ಹರಿದಿತ್ತು ಮತ್ತು ಅಲ್ಲಿ ಬಾಸುಂಡೆ (contusion) ಗಾಯಗಳು ಇದ್ದವು.

13. ಸದರಿ ಮೃತ ದೇಹದ ಎದೆ ಗೂಡು (chest cavity) ಗಳಲ್ಲಿ ಸಹಾ ಗಾಯಗಳು ಇದ್ದವು. ಆ ಮೃತ ದೇಹದ ಎದೆಯ ಎಡಭಾಗದಲ್ಲಿ ಒಂದು ಕತ್ತರಿಸಿದ ಗಾಯ ಇತ್ತು ಮತ್ತು ಆ ಗಾಯವು ಮೇಲೆ ನಮೂದು ಮಾಡಿದ 8 ನೇ ಗಾಯಕ್ಕೆ ಪೂರಕವಾಗಿ ಇತ್ತು.

14. ಆ ಮೃತ ದೇಹದ ಎಡ ಭಾಗದ ವಪೆ (dome) ಭಾಗವು ಹರಿದಿತ್ತು ಮತ್ತು ಆ ಹರಿದಿರುವ ಭಾಗವು ಮೇಲೆ ಹೇಳಿದ 8 ನೇ ಗಾಯಕ್ಕೆ ಪೂರಕವಾಗಿ ಇತ್ತು.

15.ಆ ಮೃತ ದೇಹದ ಎಡಭಾಗದ ಶ್ವಾಸಕೋಶದ ಪೊರೆ (pleura) ಪ್ರದೇಶವು ಹರಿದಿತ್ತು.

16. ಆ ಮೃತ ದೇಹದ ಉದರ ಪರಿವೇಷ್ಟನ ಪಟಲ (peritoneum) ಹರಿದಿತ್ತು ಮತ್ತು ಆ ಗಾಯವು ಸಹಾ 8 ಮತ್ತು 9 ನೇ ಗಾಯಗಳಿಗೆ ಪೂರಕವಾಗಿ ಇತ್ತು.

17. ಆ ಮೃತ ದೇಹದ ಎಡ ಕೆಳ ದವಡೆಯಲ್ಲಿ ಮೂಳೆ ಮುರಿತ ಉಂಟಾಗಿತ್ತು.

18. ಆ ಶವದ ಹೊಟ್ಟೆಯ ಭಾಗವು ಸುಸ್ತಿತಿಯಲ್ಲಿ ಇತ್ತು. ಆದರೆ ಹೊಟ್ಟೆಯಲ್ಲಿ ಸುಮಾರು 650 ಗ್ರಾಂ ನಷ್ಟು ಅನ್ನ ಮತ್ತು ಮಾಂಸದ ಎಳೆಗಳು ಇದ್ದವು.

19. ಆ ಮೃತ ದೇಹದ ಸಣ್ಣ ಕರುಳು ತೂತಾಗಿತ್ತು ಮತ್ತು ಆ ಗಾಯವು ಮೇಲೆ ಹೇಳಿದ 9 ನೇ ಗಾಯಕ್ಕೆ ಪೂರಕವಾಗಿ ಇತ್ತು.

20. ಆ ಮೃತ ದೇಹದ ಶವ ಪರೀಕ್ಷೆಯನ್ನು ಮಾಡಿದ ಸಮಯಕ್ಕಿಂತ ಸುಮಾರು 12 ರಿಂದ 14 ಗಂಟೆಗಳ ಮೊದಲು ಆ ವ್ಯಕ್ತಿಯ ಸಾವು ಸಂಭವಿಸಿದೆ ಎಂಬುದು ಶವ ಪರೀಕ್ಷೆಯಿಂದ ತಿಳಿದು ಬಂದಿತು.

21. ನನ್ನ ಅಭಿಪ್ರಾಯದಲ್ಲಿ ಆ ವ್ಯಕ್ತಿಯ ಮೇಲೆ ಆಗಿದ್ದ ಹಲವಾರು ಕತ್ತರಿಸಿದ ಗಾಯಗಳು ಮತ್ತು ಅದರ ಕಾರಣದಿಂದ ಆದ ರಕ್ತಸ್ರಾವ ಮತ್ತು ಅದರಿಂದ ಉಂಟಾದ ಆಘಾತ ಮತ್ತು ಆ ವ್ಯಕ್ತಿಯ ಮುಖ್ಯ ಅಂಗಗಳಿಗೆ ಆದ ಮಾರಣಾಂತಿಕ ಹಲ್ಲೆಗಳ ಕಾರಣದಿಂದ ಆ ವ್ಯಕ್ತಿಯ ಮರಣವು ಸಂಭವಿಸಿದೆ.

22. ಮೇಲೆ ಹೇಳಿದ ಗಾಯಗಳ ಪೈಕಿ 1 ರಿಂದ 3 ಅಂದರೆ ತಲೆಗೆ ಆಗಿದ್ದ ಗಾಯಗಳು ಮತ್ತು 8 ನೇ ಗಾಯ ಅಂದರೆ ಎಡ ಕಿಬ್ಬೊಟ್ಟೆಯ ಮೇಲೆ ಆಗಿದ್ದ ಗಾಯಗಳು ಮಾರಣಾಂತಿಕ ಗಾಯಗಳು ಆಗಿವೆ ಮತ್ತು ಆ ಕಾರಣದಿಂದಲೇ ಮರಣ ಸಂಭವಿಸಿದೆ ಎಂದು ಹೇಳಬಹುದು.

23. ಒಂದು ಕಬ್ಬಿಣದ ಮಚ್ಚಿನಿಂದ (Chopper) ಹಲ್ಲೆ ಮಾಡಿದರೆ ಮೇಲೆ ಹೇಳಿದ 1 ರಿಂದ 3 ನೇ ಗಾಯಗಳು ಆಗುವಂತಹ ಸಂಭವ ಇದೆ.

24. ಶವ ಪರೀಕ್ಷಾ ವರದಿಯ ಪುಟ ಸಂಖ್ಯೆ –2 ರಲ್ಲಿ ತಲೆ ಬುರುಡೆ ಮತ್ತು ಬೆನ್ನೆಲುಬಿನ ನಾಳ ಎಂಬ ತಲೆಬರಹದ ಅಡಿಯಲ್ಲಿ 1 ನೇ ಕಾಲಂ ನಲ್ಲಿ ನಮೂದು ಇರುವಂತಹ ಗಾಯಗಳು ಒಂದು ಹರಿತವಾದ ಮತ್ತು ಭಾರವಾದ ಆಯುಧದಿಂದ ಹೊಡೆದಾಗ ಆಗುವಂತಹ ಸಂಭವ ಇದೆ.

25. ಅದೇ ರೀತಿ ಮೇಲೆ ಹೇಳಿದ ಗಾಯಗಳ ಪೈಕಿ 8 ನೇ ಗಾಯವು ಒಂದು ಚೂಪಾದ ಮತ್ತು ಚುಚ್ಚಲು ಸಾಧ್ಯವಾಗುವ ಆಯುಧದಿಂದ ಚುಚ್ಚಿದಾಗ ಆಗುವಂತಹ ಸಂಭವ ಇದೆ.

26. ಸದರಿ ಶವ ಪರೀಕ್ಷಾ ವರದಿಯಲ್ಲಿ ನಮೂದು ಇರುವಂತಹ 1 ರಿಂದ 8 ಮತ್ತು 10, 11, 12, ಮತ್ತು 16 ನೇ ಗಾಯಗಳು ಒಂದು ಮಚ್ಚಿನಿಂದ ಅಥವಾ ಕತ್ತಿಯಿಂದ ಅಥವಾ ಅಂತಹುದೇ ಬೇರೆ ಯಾವುದೇ ಆಯುಧಗಳಿಂದ ಹಲ್ಲೆ ಮಾಡಿದರೆ ಆಗುತ್ತವೆ.

27. ಪೊಲೀಸರು ನಮಗೆ ನೀಡಿದ್ದ ಫಾರಂ ನಂ. 146 (i) ಮತ್ತು 146 (ii) ಗಳಲ್ಲಿ ಈ ಪ್ರಕರಣದ ಹಿನ್ನೆಲೆಯನ್ನು ನಮೂದು ಮಾಡಿದ್ದರು.

28. ಒರಟಾದ ಮತ್ತು ಗಟ್ಟಿಯಾದ ಮೇಲ್ ಮೈ ಹೊಂದಿರುವಂತಹ ಜಾಗ ಅಥವಾ ನೆಲ ಅಥವಾ ಗೋಡೆಗಳ ಸಂಪರ್ಕಕ್ಕೆ ಒಬ್ಬ ವ್ಯಕ್ತಿಯ ದೇಹವು ಬಂದಾಗ ಮೇಲೆ ಹೇಳಿದ 13, 14 ಮತ್ತು 15 ನೇ ಗಾಯಗಳು ಆಗುವಂತಹ ಸಂಭವ ಇರುತ್ತದೆ.

29. ತನಿಖಾಧಿಕಾರಿಯ ಕೋರಿಕೆಯಂತೆ ಆ ಮೃತ ದೇಹದಿಂದ viscera ಅನ್ನು ಸಂಗ್ರಹಿಸಿದ್ದೇನೆ ಮತ್ತು ಅದನ್ನು ಒಂದು container ನಲ್ಲಿ ಹಾಕಿ ಅದರ ಮುಚ್ಚಳವನ್ನು ಹಾಕಿ ಅದಕ್ಕೆ ಸೀಲು ಹಾಕಿ ನಂತರ CHC 207 ಶ್ರೀ. ಮಂಜುನಾಥ ರವರಿಗೆ ಕೊಟ್ಟಿದ್ದೇನೆ.

30. ಆ ಮೃತ ದೇಹದ ಹೊಟ್ಟೆಯಲ್ಲಿ ಇದ್ದಂತಹ ಆಹಾರದ ತುಣುಕುಗಳನ್ನು ಗಮನಿಸಿದಾಗ ನನ್ನ ಅಭಿಪ್ರಾಯದಲ್ಲಿ ಆ ವ್ಯಕ್ತಿಯು ಸಾಯುವುದಕ್ಕಿಂತ ಸುಮಾರು 3-4 ಗಂಟೆಗಳ ಮೊದಲು ಆಹಾರವನ್ನು ಸೇವಿಸಿರುವ ಸಾಧ್ಯತೆ ಇರುತ್ತದೆ.

31. ಈ ಬಗ್ಗೆ ನಾನು ಶವ ಪರೀಕ್ಷಾ ವರದಿಯನ್ನು ನೀಡಿದ್ದೇನೆ.

32. ಈಗ ನನಗೆ ತೋರಿಸಿದ ದಾಖಲೆಯು ನಾನು ನೀಡಿರುವ ಶವ ಪರೀಕ್ಷಾ ವರದಿ ಆಗಿದೆ. ಸದರಿ ದಾಖಲೆಯನ್ನು ನಿಪಿ. 85 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ.85(ಎ) ಎಂದು ಗುರುತಿಸಿದೆ.

33. ಈಗ ನನಗೆ ತೋರಿಸಿದ ಫೋಟೋಗಳಲ್ಲಿ ಅಂದರೆ ನಿಪಿ. 23 ರಿಂದ 29 ಎಂದು ಗುರುತು ಆಗಿರುವ ಫೋಟೋಗಳಲ್ಲಿ ಕಾಣಿಸುತ್ತಾ ಇರುವ ಚೀಟಿಯನ್ನು ನಾನೇ ಹಿಡಿದುಕೊಂಡಿದ್ದೇನೆ ಮತ್ತು ಅದರಲ್ಲಿ ಕಾಣುವ ಮೃತ ದೇಹವು ಸದರಿ ಹೇಮಂತ ಕುಮಾರನ ಮೃತ ದೇಹ ಆಗಿದೆ.

34. ಈಗ ನನಗೆ ತೋರಿಸಿದ ವಸ್ತುಗಳು ಅಂದರೆ ಮುದ್ದೆಮಾಲು-1 ಮತ್ತು 21 ಎಂದು ಗುರುತು ಆಗಿರುವ ಮಚ್ಚು ಮತ್ತು ಲಾಂಗುಗಳಿಂದ ಹಲ್ಲೆ ಮಾಡಿದರೆ ನಿಪಿ. 85 ರಲ್ಲಿ ನಮೂದು ಇರುವಂತಹ ಗಾಯಗಳು ಅಂದರೆ 1 ರಿಂದ 5, 7 ರಿಂದ 12 ಮತ್ತು 16 ನೇ ಗಾಯಗಳು ಆಗುವಂತಹ ಸಂಭವ ಇದೆ.

35. ಈಗ ನನಗೆ ತೋರಿಸಿದ ವಸ್ತುಗಳು ಅಂದರೆ ಮುದ್ದೆಮಾಲು-2 ಮತ್ತು 3 ಎಂದು ಗುರುತು ಆಗಿರುವ ದಪ್ಪ ದಪ್ಪ ಸಿಮೆಂಟು ಇಟ್ಟಿಗೆಗಳಿಂದ ಯಾವ ರೀತಿಯ

ಗಾಯಗಳು ಆಗಬಹುದು ಎಂಬ ಪ್ರಶ್ನೆಗೆಃ– ಆ ಸಿಮೆಂಟು ಇಟ್ಟಿಗೆಗಳನ್ನು ಯಾವ ರೀತಿ ಬಳಸಿರಬಹುದು ಎಂಬುದನ್ನು ಸೂಚಿಸಿದರೆ ಆಗ ಮಾತ್ರ ತಾವು ಈ ಪ್ರಶ್ನೆಗೆ ಉತ್ತರ ಹೇಳಲು ಸಾಧ್ಯವಿದೆ ಎಂದು ಸಾಕ್ಷಿದಾರರು ನುಡಿದಿದ್ದಾರೆ.

36. ಓರ್ವ ವ್ಯಕ್ತಿಗೆ ಹಲವಾರು ಜನರು ಸೇರಿಕೊಂಡು ಹಲ್ಲೆ ಮಾಡುತ್ತಾ ಇರುವಾಗ ಆ ವ್ಯಕ್ತಿಯು ತನ್ನನ್ನು ತಾನು ರಕ್ಷಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಮತ್ತು ಆ ಪ್ರಯತ್ನ ಮಾಡುವ ಸಮಯದಲ್ಲಿ ಆ ವ್ಯಕ್ತಿಯು ಆಯತಪ್ಪಿ ಮುದ್ದೆಮಾಲು–2 ಮತ್ತು 3 ಎಂದು ಗುರುತು ಆಗಿರುವ ಸಿಮೆಂಟು ಇಟ್ಟಿಗೆಗಳ ಮೇಲೆ ಬಿದ್ದರೆ ಆಗ ಯಾವ ರೀತಿಯ ಗಾಯಗಳು ಆಗುತ್ತದೆ ಎಂದರೆ ಆ ವ್ಯಕ್ತಿಯ ದೇಹದ ಯಾವ ಭಾಗವು ಆ ಸಿಮೆಂಟು ಇಟ್ಟಿಗೆಯ ಸಂಪರ್ಕಕ್ಕೆ ಬರುತ್ತದೆ ಆ ಭಾಗದಲ್ಲಿ ಮೇಲೆ ಹೇಳಿದ ಗಾಯದ ಸಂಖ್ಯೆ–6, 13, 14, 15 ರೀತಿಯ ಗಾಯಗಳು ಆಗುವ ಸಂಭವ ಇರುತ್ತದೆ.

37. ಈಗ ನನಗೆ ತೋರಿಸಿದ ಚೂರಿ ಅಥವಾ kirpan ಅಂದರೆ ಮುದ್ದೆಮಾಲು–22 ಎಂದುಗುರುತು ಆಗಿರುವ ವಸ್ತುವಿನಿಂದ ಹೊಡೆದರೆ ಮೇಲೆ ಹೇಳಿದ 8 ಮತ್ತು 9 ನೇ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಮುದ್ದೆಮಾಲು–22 ರ ಗಾತ್ರವನ್ನು ನೋಡಿದರೆ ಮೇಲೆ ಹೇಳಿದ 8 ಮತ್ತು 9 ನೇ ಗಾಯಗಳು ಆಗುತ್ತವೋ ಹೇಗೆ ಎಂದರೆ ಆ ಗಾತ್ರವನ್ನು ನೋಡಿಯೇ ಆ ಅಭಿಪ್ರಾಯವನ್ನು ನಾನು ಹೇಳುತ್ತಾ ಇದ್ದೇನೆ.

38. ಆ ಶವದ ಮೈ ಮೇಲೆ ಇದ್ದ ಬಟ್ಟೆಗಳನ್ನು ನಾನು ಸೀಲು ಮಾಡಿ ಪೊಲೀಸರಿಗೆ ಕೊಟ್ಟಿದ್ದೇನೆ. ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ವಸ್ತುಗಳು ಅಂದರೆ ಮುದ್ದೆಮಾಲು –4 ರಿಂದ 7 ಎಂದು ಗುರುತು ಆಗಿರುವ ಬಟ್ಟೆಗಳು ಆ ಹೇಮಂತ ಕುಮಾರನ ಮೃತ ದೇಹದ ಮೇಲೆ ಇದ್ದವು. ಮುದ್ದೆಮಾಲು–8 ಎಂದು ಗುರುತು ಆಗಿರುವ ಉಡುದಾರವು ಸಹಾ ಹೇಮಂತ ಕುಮಾರನ ಮೃತ ದೇಹದ ಮೇಲೆ ಇತ್ತು.

ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಸಿ ಪಿ ವಕೀಲರಿಂದಃ–

39. ಶವ ಪರೀಕ್ಷೆಯನ್ನು ಮಾಡುವ ಸಮಯದಲ್ಲಿಯೇ ನಾನು ಅಂತಿಮ PM ವರದಿಯನ್ನು ಸಹಾ ತಯಾರು ಮಾಡುತ್ತೇನೆ, ಯಾವುದೇ rough notes ಮಾಡಿಕೊಳ್ಳುವುದಿಲ್ಲ.

40. Rigor mortis follows rule of dozen. ಇದರ ಅರ್ಥ ಮರಣ ಸಂಭವಿಸಿದ 12 ಗಂಟೆಯ ಸಮಯಕ್ಕೆ Rigor mortis ಉಂಟಾಗುತ್ತದೆ ಮತ್ತು 12 ಗಂಟೆಗಳ ಕಾಲ Rigor mortis ಹಾಗೆಯೇ ಇರುತ್ತದೆ ಮತ್ತು ನಂತರದ 12 ಗಂಟೆಗಳ ಅವಧಿಯಲ್ಲಿ Rigor mortis ಸಂಪೂರ್ಣವಾಗಿ ಹೊರಟು ಹೋಗುತ್ತದೆ.

41. ನಾನು ಶವ ಪರೀಕ್ಷೆಯನ್ನು ಬೆಳಿಗ್ಗೆ 11.00 ಗಂಟೆಯ ವೇಳೆಗೆ ಪ್ರಾರಂಭಿಸಿದ್ದೇನೆ ಮತ್ತು ಮ.1.00 ಗಂಟೆಯ ವೇಳೆ ಶವ ಪರೀಕ್ಷೆಯನ್ನು ಮುಗಿಸಿದ್ದೇನೆ. ನಾನು ಸಾವು ಸಂಭವಿಸಿದ ಸಮಯವನ್ನು ಆ ಶವ ಪರೀಕ್ಷೆಯನ್ನು ಮಾಡಲು ಪ್ರಾರಂಭ ಮಾಡಿದ ಸಮಯದಿಂದ ಲೆಕ್ಕ ಮಾಡಿದ್ದೇನೋ ಅಥವಾ ಶವ ಪರೀಕ್ಷೆಯನ್ನು ಮುಗಿಸಿದ ಸಮಯದಿಂದ ಲೆಕ್ಕ ಮಾಡಿದ್ದೇನೋ ಹೇಗೆ ಎಂದರೆ ನಿರ್ದಿಷ್ಟವಾಗಿ ಇಂತಹುದೇ ಸಮಯದಲ್ಲಿ ಸಾವು ಸಂಭವಿಸಿದೆ ಎಂದು ಹೇಳುವಷ್ಟು ವಿಜ್ಞಾನವು ಬೆಳೆದಿರುವುದಿಲ್ಲ ಮತ್ತು ನಮ್ಮ ಅನುಭವದ ಆಧಾರದ ಮೇರೆಗೆ ಮತ್ತು ಆ ಮೃತ ದೇಹದಲ್ಲಿರುವ Rigor mortis ಆಧಾರದ ಮೇರೆಗೆ ಸಾವು ಸಂಭವಿಸಿರಬಹುದಾದ ಸಮಯವನ್ನು ಲೆಕ್ಕ ಮಾಡಿ ಹೇಳುತ್ತೇವೆ.

42. ಆ ಮೃತ ದೇಹದ ತಲೆ ಬುರುಡೆಯಲ್ಲಿ ಮೂಳೆ ಚೂರಾಗಿತ್ತು ಎಂದು ನಾನು ಹೇಳಿರುವ ಕಡೆ ಆ ತಲೆ ಬುರುಡೆಯ ಮೂಳೆಯ ಗಾತ್ರ ಎಷ್ಟು ಇತ್ತು ಎಂದರೆ ಯಾವುದೇ ಮನುಷ್ಯನ ತಲೆ ಬುರುಡೆಯ ಮೂಳೆಯ ಗಾತ್ರವು ಎಲ್ಲಾ ಕಡೆ ಒಂದೇ ಸಮನಾಗಿ ಇರುವುದಿಲ್ಲ. ಮನುಷ್ಯನ ತಲೆ ಬುರುಡೆಯ ಮೂಳೆಯ ಗಾತ್ರವು ಕೆಲವು ಕಡೆ 4 ಮಿಲಿ ಮೀಟರ್ ಅಷ್ಟು ದಪ್ಪ ಇರುತ್ತದೆ ಕೆಲವು ಕಡೆ 9 ಮಿಲಿ ಮೀಟರ್ ಅಷ್ಟು ದಪ್ಪ ಇರುತ್ತದೆ. ಅದೇ ರೀತಿ ಮೆದುಳಿನ ಪೊರೆಯ ಗಾತ್ರವು ಎಷ್ಟು ಇರುತ್ತದೆ ಎಂದು ಯಾವುದೇ ಪುಸ್ತಕದಲ್ಲಿಯೂ ನಮೂದು ಮಾಡಿರುವುದಿಲ್ಲ.

43. ಪ್ರತಿ ಮನುಷ್ಯನ ತಲೆಯಲ್ಲಿಯೂ ತಲೆ ಬುರುಡೆ ಮತ್ತು ಅದರ ಕೆಳಗೆ ಮೆದುಳಿನ ಪೊರೆ ಮತ್ತು ಅದರ ಕೆಳಗೆ ಮೆದುಳು ಇರುತ್ತದೆ.

44. ಮೇಲೆ ಹೇಳಿದ 1 ರಿಂದ 6 ನೇ ಗಾಯಗಳಿಂದ ಮೆದುಳಿಗೂ ಸಹಾ ಹಾನಿಯಾಗುವ ಸಂಭವ ಇರುತ್ತದೆ ಎಂದರೆ ಸರಿ. ಮೇಲೆ ಹೇಳಿದ 4 ನೇ ಗಾಯವು ಆದ ಸ್ಥಳದಿಂದ ಹರಿದ ಮೆದುಳು ಸಹಾ ಹೊರಗೆ ಬಂದಿತ್ತು.

45. cavity deep ಎಂದರೆ ಮೆದುಳಿನ ಆಳಕ್ಕೆ ಇಳಿದಿರುವ ಗಾಯ ಎಂದು ಅರ್ಥ.

46. ಮನುಷ್ಯನ ಮೆದುಳು pliable (ಅತ್ಯಂತ ಮೃದು / unduly soft) ಸ್ಥಿತಿಯಲ್ಲಿ ಇರುತ್ತದೆ. ಯಾವುದೇ ಒಂದು ಹೊರಗಿನ ಒತ್ತಡದಿಂದ ಮೆದುಳಿನ ಕಣಗಳು ಹೊರಗೆ ಬಂದಾಗ ಯಾವ ಆಯುಧ ಅಥವಾ ವಸ್ತುವಿನಿಂದ ಆ ಗಾಯವನ್ನು ಮಾಡಿರುತ್ತಾರೋ ಆ ವಸ್ತುವಿಗೆ ಮೆದುಳಿನ ಕಣಗಳು ಅಂಟಿಕೊಂಡಿರುವ ಸಾಧ್ಯತೆ ಇದೆ ಎಂದರೆ ಸರಿ. ಅದೇ ರೀತಿ ಒಂದು ಆಯುಧದಿಂದ ಒಬ್ಬ ವ್ಯಕ್ತಿಯ ತಲೆಗೆ ಹೊಡೆದು ಆತನ ತಲೆಯ ಚಿಪ್ಪು ಚೂರು ಚೂರು ಆದರೆ ಆ ತಲೆಯ ಚಿಪ್ಪಿನ ಅತ್ಯಂತ ಸಣ್ಣದಾದ ಚೂರು ಆ ಹಲ್ಲೆಗೆ ಬಳಸಿದ ಆಯುಧಕ್ಕೆ ಅಂಟಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

46. ಅದೇ ರೀತಿ ಹಲ್ಲೆಗೆ ಒಳಗಾದ ವ್ಯಕ್ತಿಯ ತಲೆಯಲ್ಲಿ ಕೂದಲು ಇದ್ದರೆ ಹಲ್ಲೆಗೆ ಬಳಸಿದ ಆಯುಧಕ್ಕೆ ಅಂಟಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

47. ಮುದ್ದೆಮಾಲು -22 ಎಂದು ಗುರುತು ಆಗಿರುವ ಚೂರಿ ಅಥವಾ ಬಾಕುವಿನಿಂದ ಚುಚ್ಚಿದಾಗ ಆಗುವಂತಹ ಗಾಯವು ಒಂದು ಕಡೆ pointed edge ಮತ್ತು ಇನ್ನು ಒಂದು ಕಡೆ blunt edge ಹೊಂದಿರುತ್ತದೆ ಎಂದರೆ ಸರಿ. ಮುದ್ದೆಮಾಲು-22 ರಿಂದ ಚುಚ್ಚಿದರೆ ಅಂಡಾಕಾರದ (oval) ಗಾಯವು ಆಗುವ ಸಾಧ್ಯತೆ ಇರುವುದಿಲ್ಲ ಎಂದರೆ ಸುಳ್ಳು.

48. ಮೇಲೆ ಹೇಳಿದ 8 ನೇ ಗಾಯವು ಒಂದು ಚೂಪಾದ ಸರಳಿನಂತಹ ಅಯುಧದಿಂದ ಚುಚ್ಚಿದರೆ ಆಗುವ ಸಾಧ್ಯತೆ ಇದೆ ಎಂದರೆ ಅಂತಹ ಅಯುಧದಿಂದ ಚುಚ್ಚಿದರೆ ಆಗುವ ಗಾಯವು ಗುಂಡಾಗಿ (circular) ಇರುತ್ತದೆ ಅಂಡಾಕಾರವಾಗಿ ಇರುವುದಿಲ್ಲ.

49. 8 ನೇ ಗಾಯದಲ್ಲಿ pointed edge ಮತ್ತು blunt edge ಎಂಬುದನ್ನು ನಿಪಿ.85 ರಲ್ಲಿ ನಾನು ನಮೂದು ಮಾಡಿಲ್ಲ ಎಂದರೆ ಸರಿ.

50. ಮೇಲೆ ಹೇಳಿದ 9 ನೇ ಗಾಯವು ಆದಂತಹ ಸಮಯದಲ್ಲಿ ಆ ಗಾಯವನ್ನು ಮಾಡಲು ಬಳಸಿದಂತಹ ಆಯುಧಕ್ಕೆ ಕೊಬ್ಬಿನ ಅಂಶವು ಅಂಟಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

51. ಮುದ್ದೆಮಾಲು-2 ಮತ್ತು 3 ಎಂದು ಗುರುತು ಆಗಿರುವ ಸಿಮೆಂಟು ಇಟ್ಟಿಗೆಗಳಿಗೆ ಆ ಮೃತ ವ್ಯಕ್ತಿಯ ತಲೆಯು ಸಂಪರ್ಕಕ್ಕೆ ಬಂದಿದ್ದರೆ ಆಗ ಆ ಕಲ್ಲುಗಳ ಮೇಲೆ ಸಹಾ ಮೆದುಳಿನ ಕಣಗಳು ಅಂಟಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

ಏನೂ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.